IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಮೃತ್ಯುಂಜಯ–ಒಂದು ಅವಲೋಕನ

ಡಾ: ಹೆಚ್.ಎಸ್. ಪ್ರೇಮಲತ

ಕನ್ನಡ ಸಹ ಪ್ರಾಧ್ಯಾಪಕರು,

ಶ್ರೀ ಮಹದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಳ್ಳೇಗಾಲ.

ಹೊಸಗನ್ನಡ ಸಾಹಿತ್ಯದ ಪ್ರಮುಖ ಘಟ್ಟಗಳಲ್ಲಿ ಒಂದಾದ ಪ್ರಗತಿಶೀಲ ಸಾಹಿತ್ಯದ ಮಹತ್ವದ ಕಾದಂಬರಿಕಾರರಾದ ನಿರಂಜನರ ಜನಪ್ರಿಯತೆಯನ್ನು ಸ್ಥಿರಸ್ಥಾಯಿಗೊಳಿಸಿದ **ಮೃತ್ಯುಂಜಯ** ಕಾದಂಬರಿಯು 1976 ರಲ್ಲಿ ಪ್ರಕಟವಾಗಿದ್ದು, ಮಾನವ ನಾಗರಿಕತೆಯ ಇತಿಹಾಸದಲ್ಲೇ ಪ್ರಪ್ರಥಮವೆನಿಸಿದ ಬಂಡಾಯದ ವಸ್ತುವನ್ನು ಒಳಗೊಂಡಿದೆ. ಪ್ರಾಚೀನ ಈಜಿಪ್ತನಲ್ಲಿ ಸುಮಾರು 4500 ವರ್ಷಗಳ ಹಿಂದೆ ದುಷ್ಟ ಸಾಮಾಜಿಕ ವ್ಯವಸ್ಥೆಯೊಂದರ ವಿರುದ್ಧ ಅಲ್ಲಿಯ ಬಹುಜನ ಸಮುದಾಯವಾಗಿದ್ದ ಗುಲಾಮಿ ರೈತರು ಬಂಡಾಯವೆದ್ದ ಘಟನೆಯು ಈ ಕಾದಂಬರಿಯ ಮೂಲ ವಸ್ತುವಾಗಿದೆ. ಮಾನವತಾವಾದಿಯಾದ ನಿರಂಜನರು ಇದನ್ನು ದಲಿತರ ಬಂಡಾಯದ ಕಥೆಯೆಂದೇ ಕರೆದಿದ್ದಾರೆ. ಕಾಲದೇಶಗಳ ಮಿತಿಯಿಲ್ಲದೆ ಪ್ರಪ್ರಂಚದಾದ್ಯಂತ ದುಷ್ಟ ಸಮಾಜ ವ್ಯವಸ್ಥೆಯೊಂದರಲ್ಲಿ ನಡೆಯುವ ಕ್ರೌರ್ಯಗಳ ವಿರುದ್ಧ ಸಾಮಾನ್ಯ ಜನ ಸಿಡಿದೇಳುವುದು. ನ್ಯಾಯಕ್ಕೋಸ್ಕರ, ಉತ್ತಮ ಬದುಕಿಗೋಸ್ಕರ ಹೋರಾಟ ನಡೆಸುವುದು ಚರಿತ್ರೆಯಲ್ಲಿ ಕಾಣುವ ಸಾಮಾನ್ಯ ಸಂಗತಿ. ಈ ಹಿನ್ನೆಲೆಯಲ್ಲಿ ಮನುಷ್ಯ ಸ್ವಭಾವವು ಎಲ್ಲಾ ಕಾಲಕ್ಕೂ ಒಂದೇ ಆಗಿರುತ್ತದೆ ಎಂಬ ಸತ್ಯವನ್ನು ನಿರಂಜನರು ಈ ಕಾದಂಬರಿಯ ಮೂಲಕ ನಿರೂಪಿಸುತ್ತಾರೆ. ಈ ಕಾದಂಬರಿಯು ಪ್ರಾಚೀನ ಐಗುಪ್ತದ ಇತಿಹಾಸವನ್ನು ಅಲ್ಲಿಯ ವರ್ಗ ಸಂಘರ್ಷವನ್ನು ಒಳಗೊಂಡಿದೆ.

ನಿರಂಜನರು ಮಾರ್ಕ್ಸವಾದಿ ಚಿಂತನೆಗಳ ಗಾಢ ಪ್ರಭಾವಕ್ಕೆ ಒಳಗಾಗಿದ್ದ ಕಾರಣ ಸಾಮ್ರಾಜ್ಯಶಾಹಿ, ಜಮೀನುದಾರಿ ಮತ್ತು ಜಾತಿ ವ್ಯವಸ್ಥೆಯ ವಿರುದ್ಧ ವಿರೋಧ ನಿಲುವನ್ನು ಹೊಂದಿದ್ದು, ಮೃತ್ಯುಂಜಯ ಕಾದಂಬರಿಯಲ್ಲಿ ಈ ವಿಚಾರಕ್ಕೆ ಸಂಬಂಧ ಪಟ್ಟಂತೆ ಸಾಮಾನ್ಯ ಜನರಲ್ಲಿ ಜಾಗೃತಿಯನ್ನು ಉಂಟು ಮಾಡುವ ಮೂಲಕ ಸಾಮಾಜಿಕ ಬದಲಾವಣೆಗಾಗಿ ತುಡಿಯುವುದು ಈ ಕಾದಂಬರಿಯಲ್ಲಿ ಎದ್ದು ಕಾಣುತ್ತದೆ. ಅಧಿಕಾರವರ್ಗದವರ ಶೋಷಣೆಯನ್ನು ಖಂಡಿಸುವುದು ಇಲ್ಲಿ ಅನಿವಾರ್ಯವಾದ ಸಂಗತಿಯೂ ಆಗಿದೆ.

ಪ್ರಾಚೀನ ಈಜಿಪ್ತನ್ನು ಮೂರು ವರ್ಗಗಳಾದ ಅರಸಪೆರೋ, ಪೂರೋಹಿತರು ಮತ್ತು ಭೂಮಾಲಿಕರು ಆಳುತ್ತಿದ್ದು, ಇವರ ದಬ್ಬಾಳಿಕೆ ದೌರ್ಜನ್ಯಗಳ ವಿರುದ್ಧ ನೀರಾನೆ ಪ್ರಾಂತ್ಯದ ನಾಯಕ ಮೆನೆಪ್‌ಟಾ ಏಳುವ ಬಂಡಾಯವೇ ಕಾದಂಬರಿಯ ಕೇಂದ್ರ ಬಿಂದು. ನಾಯಕ ಮೆನೆಪ್‌ಟಾ ಪ್ರಕಾರ "ಈ ಸಮಾಜವ್ಯವಸ್ಥೆಯು ಮೂರು ಶಕ್ತಿಗಳ ಕಪಿಮುಷ್ಟಿಯಿಂದ ನರಳುತ್ತದೆ. ಸಮೀಪವಿದ್ದು ಜನರನ್ನು ಶೋಷಣೆ ಮಾಡುವ ಭೂಮಾಲಿಕ ವರ್ಗ, ದೂರದಲ್ಲಿದ್ದರೂ ಶೋಷಣೆಯ ಕೇಂದ್ರವಾಗಿರುವ ಪೆರೋಅರಸ ಹಾಗೂ ಮಹಾ ಅರ್ಚಕರು. ತೋರಿಕೆಗೆ ಪೆರೋನ ಪ್ರಭುತ್ವ ಕಂಡರೂ ವಾಸ್ತವವಾಗಿ ರಾಜ್ಯಸೂತ್ರಗಳೆಲ್ಲ ಮಹಾಅರ್ಚಕರ ಕೈಯಲ್ಲಿಯೇ ಇರುತ್ತದೆ. ಮುಗ್ದರಾದ ಪ್ರಜೆಗಳಿಗೆ ಇದಾವುದರ ಅರಿವು ಇರುವುದಿಲ್ಲ. ಅವರಿಗೆ ಗೊತ್ತಿರುವುದು ದುಡಿಯುವುದೊಂದೆ. ಯಾವಾಗ ದುಡಿಮೆಯ ಫಲವೆಲ್ಲ ಉಳ್ಳವರ ಪಾಲಿನ ವಶವಾಗುವುದೋ ಆಗ ಆ ಮೂರೂ ಶಕ್ತಿಗಳ ವಿರುದ್ಧ ಅಲ್ಲಿಯ ಗುಲಾಮರು ರೈತರು ಹೋರಾಟ ನಡೆಸುತ್ತಾರೆ".

ನೀರಾನೆ ಪ್ರಾಂತ್ಯಕ್ಕೆ ಕಂದಾಯದ ವಸೂಲಿಗೆಂದು ಬಂದ ಅಧಿಕಾರಿ ಟೆಹುಟಿಯೇ ಹೇಳುವಂತೆ "ಅರಮನೆ ವೆಚ್ಚಕ್ಕೆ ಆಡಳಿತ ವೆಚ್ಚಕ್ಕೆ ಅಪಾರ ಧನ ಕನಕ ಬೇಕು. ಅದು ಬರೋದು ಪ್ರಜೆಗಳು ನೀಡೋ ತೆರಿಗೆಯಿಂದ. ದೇವದೇವತೆಯರು, ಮೆಂಫಿಸಿನ ದೇವಾಲಯ ಇದಲ್ಲದೇ ಇನ್ನೆಷ್ಟೋ ದೇವಾಲಯಗಳು........ ಇವುಗಳ ವೆಚ್ಚಕ್ಕೆ ಹಣ ಎಲ್ಲಿಂದ ಬರ್ತದೆ! ಕಂದಾಯದಿಂದ, ತೆರಿಗೆಯಿಂದ....."–1. ಹೀಗೆ ತೆರಿಗೆಯನ್ನು ನೀಡುವವರು ದುಡಿಯುವ ರೈತರು, ಕುಶಲ ಕರ್ಮಿಗಳು, ಸಾಮಾನ್ಯ ಪ್ರಜೆಗಳು.

ಪ್ರಾಂತ ಪಾಲರ ವಿಲಾಸದ ಬದುಕಿಗೆ ಅರಮನೆಯ ವೈಭವದ ಜೀವನಕ್ಕೆ ಅಧಿಕಾರಿಗಳ ಲಾಲಸೆಗೆ, ಭೂಮಾಲಿಕರ ಭೋಗಕ್ಕೆ, ರೈತರ ಹಣವೇ ಮೂಲವಾಗಿದ್ದು, ಈ ಕಾರಣಕ್ಕಾಗಿ ಅವರನ್ನು ನಿರಂತರ ಶೋಷಣೆಗೆ ಈಡುಮಾಡಲಾಗಿತ್ತು. ರೈತರ ಕಷ್ಟವನ್ನು ಕೇಳುವವರೇ ಗತಿ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಯಿತು. ಅವರು ತಮ್ಮ ಕಷ್ಟವನ್ನು ಕಂದಾಯದ ಅಧಿಕಾರಿ ಹಾಗೂ ಭೂಮಾಲಿಕರಲ್ಲಿ ನಿವೇದಿಸಿಕೊಳ್ಳಲು ಮೆನೆಪ್ಟನ್‌ನ್ನು ತಾವೇ ಮುಂದಾಳುವಾಗಿ ಆರಿಸಿ ರಾಜಗೃಹಕ್ಕೆ ಕಳುಹಿಸಿ ಕೊಡುತ್ತಾರೆ. ಆಗ ರೈತರ ಕಷ್ಟವನ್ನು ಹೇಳುತ್ತಲೇ ವ್ಯವಸ್ಥೆಯ ನ್ಯೂನ್ಯತೆಯನ್ನು ಪ್ರಶ್ನಿಸ ಹೊರಟವನಿಗೆ ಸಿಗುವುದು ಕಂಬಕ್ಕೆ ಕಟ್ಟಿಸಿಕೊಂಡು ಬಾರುಕೋಲಿನ ರುಚಿ ಸವಿಯುವ ಅವಕಾಶ, ಕೌರ್‍ಯದ ಉತ್ತರ ತಮ್ಮ ಪರವಾಗಿ ನಿಂತು ಮಾತನಾಡಿದ ಕ್ಷಣದಿಂದಲೇ ನೀರಾನೆ ಪ್ರಾಂತ್ಯವು ಮೆನಪ್‌ಟಾನ ನಾಯಕತ್ವವನ್ನು ಒಪ್ಪಿಕೊಂಡು ಗೌರವಿಸುತ್ತದೆ. ಆತನ ಬಿಡುಗಡೆಯಾಗದ ಹೊರತು ಕಂದಾಯ ನೀಡಲಾರೆವು ಎಂದು ಅಲ್ಲಿಯ ಜನರು ಪಟ್ಟು ಹಿಡಿಯುತ್ತಾರೆ. ಅಲ್ಲಿಯ ಜನರು ಸಂಘಟನೆಯಾಗಿ ಹೋರಾಟದ ಹಾದಿ ಹಿಡಿದಾಗ ಭೂಮಾಲೀಕರು ಹಾಗೂ ಅಧಿಕಾರಿ ವರ್ಗ ಪಲಾಯನ ಮಾಡುತ್ತದೆ. ನೀರಾನೆ ಪ್ರಾಂತ್ಯವು ಹಳೆ ವ್ಯವಸ್ಥೆಯನ್ನು ಬಿಟ್ಟು ಹೊಸ ಜೀವಂತ ಬದುಕನ್ನು ಕಟ್ಟಿಕೊಳ್ಳುವಲ್ಲಿ ನಿರತವಾಗುತ್ತದೆ. ಇಲ್ಲಿಗೆ ಕಾದಂಬರಿಯ ಒಂದು ಘಟ್ಟವು ಮುಕ್ತಾಯವಾಗುತ್ತದೆ.

ಅನಂತರ ಸೆಡ್ ಉತ್ಸವದ ನೆಪದಲ್ಲಿ ನೀರಾನೆ ಪ್ರಾಂತ್ಯದ ನಾಯಕ ಮೆನೆಪ್‌ಟಾ ನಿಗೆ ಕರೆ ಬರುತ್ತದೆ. ಅಷ್ಟರೊಳಗಾಗಲೇ ನೀರಾನೆ ಪ್ರಾಂತ್ಯದಲ್ಲಿ ಜಡ್ಡು ಗಟ್ಟಿದ ಆಡಳಿತ ವ್ಯವಸ್ಥೆ ನಾಶವಾಗಿ ಅವರದೇ ಆದ ಹೊಸ ವ್ಯವಸ್ಥೆ ಜಾರಿಗೊಳ್ಳುತ್ತದೆ. ಮೆನೆಪ್‌ಟಾ ಹೇಳುವಂತೆ " ಹೊಸ ವ್ಯವಸ್ಥೆಯಲ್ಲಿ ದಾಸರಿಲ್ಲ. ದಾಸಿಯರಿಲ್ಲ. ಎಲ್ಲರೂ ಮುಕ್ತರು ವಿಮುಕ್ತ ದುಡಿಮೆಗಾರರು..... ಭೋಜನ ಮಂದಿರದ ದಾಸಿಯರ ಅಗತ್ಯವಿಲ್ಲ. ಅವರು ಸ್ವತಂತ್ರರು....."–2.

ಸಾಮಾನ್ಯ ಜನರು ಅನಕ್ಷರಸ್ಥರಾಗಿರುವರೆಗೂ ಅವರ ಮುಗ್ಧತೆಯನ್ನು ದುರುಪಯೋಗಪಡಿಸಿಕೊಂಡು ಶೋಷಣೆಗೆ ಒಳಗು ಮಾಡುವ ಅವಕಾಶ ಎಲ್ಲಾ ಕಾಲದಲ್ಲಿಯೂ ಇರುವಂತಹುದೆ. ಇದನ್ನು ಮನಗಂಡ ಮೆನೆಪಟಾ ತನ್ನ ಮಗ ರಾಮೆರಿಗೆ ವಿದ್ಯೆ ಕಲಿಸುವುದರ ಜೊತೆಗೆ ಊರಿನ ಇತರ ಮಕ್ಕಳಿಗೂ ವಿದ್ಯೆ ಕಲಿಸುವ ಸಲುವಾಗಿ ಹೊಸದೊಂದು ಶಾಲೆ ತೆರೆಯಲು ಏರ್ಪಾಡು ಮಾಡುತ್ತಾನೆ. ಪ್ರಾಂತಪಾಲ ಗೆಬು, ನೀರಾನೆ ಪ್ರಾಂತ್ಯದ ಭೂಮಾಲೀಕರುಗಳಾದ ನುಟ್‌ಮೋಸ್ ಸೆತೆನ್ತಕ್, ಹೆಜಿರೆ, ಸಿನ್ಯೂಹೆ ಜನದ್ರೋಹಿಗಳಾದ ಕಾರಣ ಅವರ ಜೀತದ ಆಳುಗಳನ್ನು ಬಂಧಮುಕ್ತರೆಂದು ಘೋಷಿಸಲಾಗುತ್ತದೆ. ಅವರ ರಾಸು ಹಾಗೂ ಹೊಲಗಳನ್ನು ಇತರರಿಗೆ ಹಂಚಲಾಗುತ್ತದೆ. ಜನನಾಯಕನಾಗಿ ನೀರಾನೆ ಪ್ರಾಂತ್ಯದ ಎಲ್ಲ ಜನರ ಪ್ರೀತಿ, ಗೌರವಾಭಿಮಾನಗಳಿಗೆ ಮೆನೆಪ್‌ಟಾ ಪಾತ್ರನಾಗುವುದಲ್ಲದೆ, ಸಾಮಾನ್ಯ ಜನರ ಹಿತಚಿಂತನೆ ಮಾಡುತ್ತಲೇ ಅಸಾಧಾರಣ ನಾಯಕನಾಗಿ ಬೆಳೆಯುತ್ತಾನೆ. "ವೈಯಕ್ತಿವಾಗಿ ನನಗೇನಾಗ್ತದೆ ಅನ್ನೋವುದು ಮಹತ್ವದ್ದಲ್ಲ. ನೀರಾನೆ ಪ್ರಾಂತ್ಯದ ಜನ ನೆಮ್ಮದಿಯಿಂದ ಬದುಕೋದು ಸಾಧ್ಯವಾಗಬೇಕು"3. ಇದು ಅವನ ಜೀವನದ ಮಂತ್ರವಾಗುತ್ತದೆ. ಆತನ ಬಂಡಾಯದ ಸುದ್ದಿ ಜನಜನಿತವಾಗಿ ಅರಸ ಪೆರೋ, ಮಹಾಅರ್ಚಕ ಹೇಪಾಟ್ ಹಾಗೂ ಭೂಮಾಲಿಕರ ನಿದ್ರಾಭಂಗವಾಗುತ್ತದೆ.

ಸೆಡ್ ಉತ್ಸವದ ನಿಮಿತ್ತ ಐಗುಪ್ತ ದೊರೆ ಪೆರೋನ ಆದೇಶದ ಮೇರೆಗೆ ನೀರಾನೆ ಪ್ರಾಂತ್ಯದ ನಾಯಕ ಮೆನೆಪ್‌ಟಾನಿಗೆ ಭಾಗವಹಿಸುವಂತೆ ಕರೆಬಂದ ಹಿನ್ನಲೆಯಲ್ಲಿ ರಾಜಧಾನಿ ಮೆಂಫಿಗೆ ಮೆನೆಪ್‌ಟಾ ಆಗಮಿಸುವುದರೊಂದಿಗೆ ಗುಲಾಮರ ಹಾಗೂ ಒಡೆಯರ ಸಂಘರ್ಷವು ಕಾದಂಬರಿಯಲ್ಲಿ ಬೇರೆ ಆಯಾಮವನ್ನು ಪಡೆದುಕೊಳ್ಳುತ್ತದೆ. ರಾಜಾತಿಥ್ಯದ ನಯನಾಜೂಕಿನೊಂದಿಗೆ ಅವನನ್ನು ಬರಮಾಡಿಕೊಳ್ಳುವ ರಾಜನ ಅಧಿಕಾರಿ ವರ್ಗ ವ್ಯವಸ್ಥಿತವಾಗಿ ಅವನನ್ನು ಸೆರೆಹಿಡಿಯುವ ಸಂಚನ್ನು ಹೂಡುತ್ತದೆ. ರಾಜಧಾನಿಯಲ್ಲಿ ಅರಮನೆ, ಗುರುಮನೆಯಲ್ಲಿನ ಐಷಾರಾಮಿ ಬದುಕು ಪಾನಮಂದಿರ ಭೋಜನ ಗೃಹ ಒಂದೆಡೆ, ಬಡವರ ವಸತಿ ಕುಶಲ ಕರ್ಮಿಗಳ, ದುಡಿಯುವ ಸ್ತ್ರೀ ಪುರುಷರ, ದಾಸದಾಸಿಯರ, ರೈತವರ್ಗದ ನಡುವೆ ಇರುವ ಅಗಾಧ ಅಂತರ ಸ್ಪಷ್ಟವಾಗುತ್ತದೆ.

ಬಡಜನರನ್ನು ಧರ್ಮ ದೇವರ ಹೆಸರಿನಲ್ಲಿ ಸುಲಿಯುವ ಪುರೋಹಿತ ವರ್ಗ, ಪೆರೋ ವಿರುದ್ಧ ಮಹಾಅರ್ಚಕ ನಡೆಸುವ ಸಂಚು ಅಲ್ಲಿಯ ರಾಜಕೀಯ ರಹಸ್ಯಗಳು ಅವನಿಗೆ ಹೇಸಿಗೆ ಹುಟ್ಟಿಸುತ್ತವೆ. ಮೆನೆಪ್‌ಟಾನನ್ನು ಸೆಡ್ ಉತ್ಸವಕ್ಕೆ ಬಲಿಕೊಡುವ ನಿರ್ಧಾರವಾಗುತ್ತದೆ.

ರಾಜಕೀಯ ಚದುರಂಗದಾಟದಲ್ಲಿ ತಾನು ಜೀವಂತ ಕಾಯಿ ಎಂಬ ಅರಿವು ಮೂಡುವುದರೊಳಗೆ ಕಾಲ ಮೀರಿರುತ್ತದೆ. ಮೆನೆಪ್‌ಟಾಗೆ ತನ್ನವರ ನೆರವಿನೊಂದಿಗೆ ಪಲಾಯನ ಮಾಡುವ ಅವಕಾಶ ದೊರೆತರೂ ಋಜುಮಾರ್ಗ ಹಿಡಿದು ಹೋರಾಡುವ ತೀರ್ಮಾನಕ್ಕೆ ಬರುತ್ತಾನೆ. ಸೆಡ್ ಉತ್ಸವದ ನಂತರ ಸೆರೆಮನೆಯಲ್ಲಿ ಬಂಧಿಸಿದ್ದ ಅವನನ್ನು ವಿಚಾರಣೆ ಮಾಡುವ ತೋರಿಕೆಯ ನಾಟಕ ನಡೆಯುತ್ತದೆ. ಪಟ್ಟಭದ್ರ ಹಿತಾಶಕ್ತಿಗಳಾದ ರಾಜ ಪೆರೋ ಮಹಾಅರ್ಚಕ ಹಾಗೂ ಅಮಾತ್ಯ ವರ್ಗ ಆತನನ್ನು ಸಾಮಾನ್ಯ ಜನರೆದುರು ನ್ಯಾಯ ಸ್ಥಾನದಲ್ಲಿ ರಾಜದ್ರೋಹಿ, ಧರ್ಮದ್ರೋಹಿ ಎಂದು ಬಿಂಬಿಸುವಲ್ಲಿ ಮುಂದಾಗುತ್ತಾರೆ. ಟಿಹುಟಿ, ಪ್ರಾಂತಪಾಲ ಗೇಬು ಹಾಗೂ ಭೂಮಾಲಿಕರು ಎಲ್ಲರ ಮುಂದೆ ಇಲ್ಲಸಲ್ಲದ ಆರೋಪಗಳನ್ನು ಪೂರ್ವಯೋಜಿತ ರೀತಿಯಲ್ಲಿ ಸಲ್ಲಿಸುತ್ತಾರೆ. ಕೊನೆಗೆ ಬಡಪಾಯಿ ಮೆನೆಪ್‌ಟಾನಿಗೂ ಮಾತನಾಡುವ ಅವಕಾಶ ನೀಡಲಾಗುತ್ತದೆ. ಆ ಸಂದರ್ಭದಲ್ಲಿ ಮೆನೆಪ್‌ಟಾ ಆಡುವ ಮಾತುಗಳು ಬಡಜನರ ಶೋಷಣೆಯ ಚಿತ್ರಣವನ್ನು

ಅರ್ಥಪೂರ್ಣವಾಗಿ ಕಟ್ಟಿಕೊಡುತ್ತವೆ. "ಜೀವತೇದು ದುಡಿಯುವ ಜನರಿಗೆ ಅರೆಹೊಟ್ಟೆ, ಚಾಟಿ ಏಟು. ಕೊಬ್ಬಿದ ಭೂಮಾಲೀಕರಿಗೆ ಅರಮನೆ ಪಲ್ಲಕ್ಕಿ; ದರಿದ್ರರ ಶವಗಳ ಮೇಲೆ ತುಣಕು ಬಟ್ಟೆಯೂ ಇಲ್ಲ : ಆದರೆ ಮಂದಿರದ ಸೋಮಾರಿ ಬೆಕ್ಕು ಸತ್ತಾಗ ಅದಕ್ಕೆ ಶವಲೇಪನ ! ಅರ್ಚಕ ವರ್ಗದ ಕಾಮತೃಷೆಗೆ ದೇವಸೇವಿಕೆಯರ ಬಲಿ. ಮುದ್ದು ಮಕ್ಕಳ ತಾಯಿಂದಿರಾಗಬೇಕಾದ ಹೆಂಗಳೆಯರಿಗೆ ಮಂದಿರದ ಪವಿತ್ರ ಗೂಳಿ ಪವಿತ್ರ ಟಗರುಗಳ ಜೊತೆ ಕಡ್ಡಾಯ ಸಂಭೋಗ"4. ಬಡಜನತೆಯ ಸ್ಥಿತಿಗತಿಗಳು ಸಿರಿವಂತರ ಕಪಿಮುಷ್ಟಿಯೊಳಗೆ ನಿಯಂತ್ರಣಕ್ಕೆ ಒಳಗಾಗಿದ್ದ ರೀತಿಯನ್ನು ಮೆನೆಪ್ಟಾನ ಈ ಮಾತುಗಳು ದೃಢಪಡಿಸುತ್ತದೆ. "ಇದು ಸ್ವರ್ಣ ಪಿಶಾಚಿಗಳ ಸಮಾಜ, ಮನುಷ್ಯ ಜೀವಕ್ಕೆ ಇಲ್ಲಿ ಬೆಲೆಯಿಲ್ಲ. ಹೋರಾಟದಲ್ಲಿ ಸೆರೆಸಿಕ್ಕವರು ನಮ್ಮ ವ್ಯವಸ್ಥೆಯ ಗುಲಾಮರಾಗ್ತಾರೆ......"–5. ಎಂಬ ಆತನ ಮಾತುಗಳು ಸಾಮಾಜಿಕ ವ್ಯವಸ್ಥೆಯ ಕ್ರೌರ್ಯವನ್ನು ಮನದಟ್ಟು ಮಾಡುತ್ತವೆ. ಇಷ್ಟಾದರೂ ಬಲಿಷ್ಠ ವರ್ಗ ಮೆನೆಪ್‌ಟಾಗೆ ಗಲ್ಲು ಶಿಕ್ಷೆ ವಿಧಿಸಿ ಅಟ್ಟಹಾಸ ಮಾಡುತ್ತದೆ. ಅನಂತರ ಮಹಾಅರ್ಚಕರ ನೇತೃತ್ವದಲ್ಲಿ ಸೈನ್ಯವು ಹೊರಟು ನೀರಾನೆ ಪ್ರಾಂತ್ಯವನ್ನು ವಶಪಡಿಸಿಕೊಳ್ಳಲು ದಂಡಯಾತ್ರೆ ಹೊರಡುತ್ತದೆ. ತಮ್ಮ ನಾಯಕನ ಕಳೇಬರವನ್ನು ಊರಿಗೆ ತಂದು ಅಂತ್ಯಸಂಸ್ಕಾರ ನಡೆಸುವಷ್ಟರಲ್ಲಿ ಮೆನೆಪ್‌ಟಾನ ಹಿಂಬಾಲಕರನೇಕರು ಹತರಾಗುತ್ತಾರೆ. ಇಲ್ಲಿ ಹೋರಾಟದ ಹಾದಿ ದಿಕ್ಕು ತಪ್ಪುತ್ತದೆ. ರಾಜಪ್ರಭುತ್ವ ಹಾಗೂ ಪುರೋಹಿತ ವ್ಯವಸ್ಥೆಗಳ ಮಧ್ಯೆ ಭಿನ್ನಾಭಿಪ್ರಾಯಗಳಿದ್ದರೂ ಈ ಎರಡೂ ಶಕ್ತಿಗಳು ತಮ್ಮ ಸ್ವಂತ ಹಿತಾಸಕ್ತಿಗಳ ಸಂದರ್ಭದಲ್ಲಿ ಒಟ್ಟಾಗಿ ನಿಲ್ಲುತ್ತವೆ. ಇವರನ್ನು ಆಶ್ರಯಿಸಿದ ಭೂಮಾಲಿಕ ವರ್ಗ ನೀರಾನೆ ಪ್ರಾಂತ್ಯದ ರೈತರ ಬಂಡಾಯವನ್ನು ಹತ್ತಿಕ್ಕುವಲ್ಲಿ ಯಶಸ್ವಿಯಾಗುತ್ತದೆ.

ಚಿರಸ್ಮರಣೆ ಕಾದಂಬರಿಯಂತೆ ಇಲ್ಲಿಯೂ ಹೋರಾಟಗಾರರಿಗೆ ಗೆಲುವು ಸಿಗುವುದಿಲ್ಲ. ಆದರೆ ಹೋರಾಟದ ವಿಫಲತೆಯ ಮೂಲಕವೇ ಮರುಹೋರಾಟದ ಸಾಧ್ಯತೆಯನ್ನು ಕಾದಂಬರಿಕಾರರು ಅರ್ಥಪೂರ್ಣವಾಗಿ ಅನಾವರಣ ಗೊಳಿಸಿದ್ದಾರೆ. "ನಿರಂಜನರ ವಿಮೋಚನೆ, ಚಿರಸ್ಮರಣೆ, ಮೃತ್ಯುಂಜಯಗಳಂತಹ ಪ್ರಗತಿಶೀಲ ಚಿಂತನ ಧಾರೆಯ ಐತಿಹಾಸಿಕ ಕಾದಂಬರಿಗಳು ಜಾಗತಿಕ ಭಾಷೆ ಮತ್ತು ಸಾಹಿತ್ಯದಲ್ಲಿ ಸ್ಥಾನ ಪಡೆದಿದೆ. ಪ್ರಗತಿಶೀಲ ಸಾಹಿತ್ಯದ ವೈಜ್ಞಾನಿಕ ವಿಚಾರವನ್ನು ಆಳವಾಗಿ ನೋಡಿದವರಲ್ಲಿ ನಿರಂಜನರು ಅದ್ವಿತೀಯರು"–6. ಎಂಬ ಮಾತು ಉಲ್ಲೇಖನೀಯ.

**ಪರಾಮರ್ಶನ ಗ್ರಂಥಗಳು:**


1. ನಿರಂಜನ, ಮೃತ್ಯುಂಜಯ; ಪುಟ 26, ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು.
2. ನಿರಂಜನ, ಮೃತ್ಯುಂಜಯ; ಪುಟ 82, ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು
3. ನಿರಂಜನ, ಮೃತ್ಯುಂಜಯ; ಪುಟ 219, ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು
4. ನಿರಂಜನ, ಮೃತ್ಯುಂಜಯ; ಪುಟ 363, ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು
5. ನಿರಂಜನ, ಮೃತ್ಯುಂಜಯ; ಪುಟ 364, ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು
6. ಡಾ: ಶ್ರೀಧರ ಹೆಗಡೆ; ನಿರಂಜನ, ಪುಟ 65, ಚೇತನ ಪ್ರಿಂಟರ್ಸ್ & ಪಬ್ಲಿಷರ್ಸ್ ಮೈಸೂರು.